[illegible]

ನಂ.ಎಸ್‌ಡಬ್ಲ್ಯೂಎಲ್:361:ಎಸ್‌ಎಡಿ:86.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ, 3ನೇ ಹಂತ,
2ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು.:ದಿನಾಂಕ:22-6-1987.

## ಸುತ್ತೋಲೆ.

ವಿಷಯ:- ನಾಯಕ, ನಾಯ್ಕ, ಬೇಡ, ವಾಲ್ಮೀಕಿ, ತಳವಾರ, ಪರಿವಾರ ಇತ್ಯಾದಿ ಜನರಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ, ಹಾಗೂ ಶಿಕ್ಷಣದ ವಿಷಯದಲ್ಲಿ ಪರಿಶಿಷ್ಟ ವರ್ಗದವರೆಂದು ಪರಿಗಣಿಸುವ ಬಗ್ಗೆ.

ಉಲ್ಲೇಖ:1) ದಿನಾಂಕ:23-1-86ರ ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್:63:ಎಸ್‌ಎಡಿ :85.

2) ದಿನಾಂಕ:9-9-86ರ ಸರ್ಕಾರಿ ಆದೇಶ ಕ್ರಮಾಂಕ ಎಸ್.ಡಬ್ಲ್ಯೂಎಲ್:220:ಎಸ್‌ಎಡಿ:86.

3) ದಿನಾಂಕ:22-11-86ರ ಸರ್ಕಾರಿ, ಆದೇಶ ಕ್ರಮಾಂಕ ಡಿಪಿಎಆರ್:14:ಎಸ್‌ಬಿಸಿ:86.

-o0o-

1. ಉಲ್ಲೇಖ (1) ರಲ್ಲಿ ಕಾಣಿಸಿರುವ ಸರ್ಕಾರಿ ಆದೇಶದಲ್ಲಿ 'ನಾಯಕ' ನಾಯ್ಕ, ಬೇಡ, ಪರಿವಾರ, ವಾಲ್ಮೀಕಿ, ತಳವಾರ, ಮಾಲೇರು ಮತ್ತು ಕುರುಬ ಜನಾಂಗದವರಿಗೆ ಪರಿಶಿಷ್ಟ ಬುಡಕಟ್ಟು ಜನರಿಗೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಮೀಸಲಾತಿ ಮತ್ತು ಶೈಕ್ಷಣಿಕ ರಿಯಾಯಿತಿಗಳನ್ನು ವಿಸ್ತರಿಸಲಾಗಿದೆ. ಜೊತೆಗೆ ಈ ಜನಾಂಗದವರು ತಾವು ಬುಡಕಟ್ಟುಗಳಿಗೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಈಗಾಗಲೇ ಉದ್ಯೋಗದಲ್ಲಿ ಮೀಸಲಾತಿ ಮತ್ತು ಇತರೆ ರಿಯಾಯಿತಿ ಸೌಲಭ್ಯಗಳನ್ನು ಪಡೆದುಕೊಂಡಿದ್ದರೆ ಅಂಥವರ ಮೇಲೆ ಯಾವ ಕ್ರಮಗಳನ್ನು ಜರುಗಿಸಬಾರದು ಮತ್ತು ಯಾವುದೇ ಕ್ರಮ ಜರುಗಿಸಿದ್ದರೆ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ. ಮೇಲೆ ತಿಳಿಸಿದ ಜನಾಂಗದವರನ್ನು ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಕೇಂದ್ರ ಸರ್ಕಾರದ ತೀರ್ಮಾನವನ್ನು ಕಾಯ್ದಿರಿಸಿ, ಈ ಜನಾಂಗಗಳವರಿಗೆ ಮೇಲೆ ತಿಳಿಸಿದ ಸೌಲಭ್ಯಗಳನ್ನು ನೀಡಲಾಗಿದೆ.

2. ಉಲ್ಲೇಖ (1) ರಲ್ಲಿ ಕಾಣಿಸಿರುವ ಸರ್ಕಾರಿ ಆದೇಶಕ್ಕೆ ಭಾಗಶಃ ಸ್ವಲ್ಪ ಸರ್ಕಾರಿ ತಿದ್ದುಪಡಿ ಮಾಡಿ, ಉಲ್ಲೇಖ 2ರಲ್ಲಿನ ಆದೇಶವನ್ನು ಹೊರಡಿಸಲಾಗಿದೆ. ಈ ಆದೇಶದನ್ವಯ ಅಂದರೆ ಉಲ್ಲೇಖ(2) ರಲ್ಲಿ ಆದೇಶದನ್ವಯ ಕುರುಬ ಜಾತಿಗೆ ಸೇರಿದವರು ಹಿಂದುಳಿದ ವರ್ಗಗಳ ಪಟ್ಟಿಯಲ್ಲೇ ಮುಂದುವರೆಯತಕ್ಕದೆಂದು ಸೂಚಿಸಲಾಗಿದೆ.

3. ಉಲ್ಲೇಖ (3) ರಲ್ಲಿ ಕಾಣಿಸಿರುವ ಆದೇಶದಲ್ಲಿ, ದಿನಾಂಕ:23-1-86ರ ಸರ್ಕಾರಿ ಆದೇಶದಲ್ಲಿರುವ ನಿರ್ದೇಶನಗಳು ದಿನಾಂಕ: 23-1-86ಕ್ಕೂ ಮುಂದೆ ಸರ್ಕಾರಿ ಸೇವೆಗೆ ನೇಮಕವಾಗುವಾಗ ಅಥವಾ ಪದೋನ್ನತಿ ಪಡೆಯುವಾಗ ಪರಿಶಿಷ್ಟ ವರ್ಗದ ಜನರಿಗೆ ದೊರೆಯುವ ಮೀಸಲಾತಿ ಸೌಲಭ್ಯಗಳನ್ನು ಪಡೆದುಕೊಂಡಿರುವ ನಾಯಕ, ನಾಯ್ಕ, ಬೇಡ, ವಾಲ್ಮೀಕಿ, ಪರಿವಾರ, ತಳವಾರ ಮತ್ತು ಮಾಲೇರು ಜನಾಂಗಳವರ ನೌಕರರ ಪ್ರಕರಣಗಳಿಗೆ ಅನ್ವಯವಾಗುತ್ತದೆ. ಹಾಗೂ ದಿನಾಂಕ:23.1.86ರ ನಂತರ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ನೇಮಕಾತಿ ಮತ್ತು ಪದೋನ್ನತಿ ಮೀಸಲಾತಿ ಪಡೆದಿರುವವರ ಪ್ರಕರಣಗಳಿಗೆ ಅನ್ವಯವಾಗುವುದಿಲ್ಲವೆಂದು ಸ್ಪಷ್ಟವಾಗಿ ಸೂಚಿಸಲಾಗಿದೆ.

4. ನಾಗರೀಕ ಹಕ್ಕು ಸಮಾಚಾರಣ ವಿಭಾಗದ ಆರಕ್ಷಕ ಉಪ ಮಹಾ ನಿರೀಕ್ಷಕರವರು ತಮ್ಮ ದಿನಾಂಕ:10-12-86ರ ಪತ್ರಾಂಕ ಜಾತಿ 6 ನಾಹಜಾವಿ 86ರಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಎಲ್ 63 ಎಸ್‌ಎಡಿ:85ನ್ನು ಹೊರಡಿಸಿದ ನಂತರ ಅಂದರೆ ದಿನಾಂಕ: 23-1-86ರ ನಂತರ ಬೇಡ, ವಾಲ್ಮೀಕಿ ಪರಿವಾರ, ತಳವಾರ, ನಾಯಕ, ನಾಯ್ಕ ಮತ್ತು ಮಾಲೇರು ಜಾತಿಗಳವರು ತಾವು ಪರಿಶಿಷ್ಟ, [illegible] ಪಂಗಡಗಳಿಗೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಉದ್ಯೋಗ ಅಥವಾ ಬಡ್ತಿಯನ್ನು ಪಡೆದುಕೊಂಡಿದ್ದರೆ ಅಂಥವರನ್ನು ಅಪರಾಧಿಗಳೆಂದು ಪರಿಗಣಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

5. ಉಲ್ಲೇಖ (3) ರಲ್ಲಿ ಕಾಣಿಸಿರುವ ಆದೇಶದಲ್ಲಿ 23-1-86ರ ನಂತರ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ನೇಮಕಾತಿ ಮತ್ತು ಪದೋನ್ನತಿ ಮೀಸಲಾತಿ ಪಡೆದಿರುವ ಪ್ರಕರಣಗಳಿಗೆ ಉಲ್ಲೇಖ (1) ರಲ್ಲಿ ಕಾಣಿಸಿರುವ ಸರ್ಕಾರಿ ಆದೇಶದಲ್ಲಿ ವಿಸ್ತರಿಸುವ ಸೌಲಭ್ಯಗಳು ಅನ್ವಯವಾಗುವುದಿಲ್ಲ ಎಂದು ಆದೇಶಿಸಲಾಗಿದೆ. ಆದ್ದರಿಂದ 23-1-86ರ ನಂತರದ ಪ್ರಕರಣಗಳ ಬಗ್ಗೆ ಕಾನೂನುಗಳಿಗನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ರಾಜ್ಯ ಸರ್ಕಾರದ ವ್ಯಾಪ್ತಿಗೊಳಪಟ್ಟ ಎಲ್ಲಾ ಇಲಾಖೆಗಳ, ಸ್ಥಾನಿಕ ಸಂಸ್ಥೆಗಳ, ನಿಗಮಗಳ ಮತ್ತು ಸಂಸ್ಥೆಗಳ ಮುಖ್ಯಾಧಿಕಾರಿಗೆ ಈ ಮೂಲಕ ಸೂಚಿಸಿದೆ.

ಸಹಿ:-

(ಡಿ.ಎಸ್.ತಿಪ್ಪೇಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,

SWL 66 BCA 86 dt 13-10-86



ಪರಿಗಣಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

5. ಉಲ್ಲೇಖ (3) ರಲ್ಲಿ ಕಾಣಿಸಿರುವ ಆದೇಶದಲ್ಲಿ 23-1-86ರ ನಂತರ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ನೇಮಕಾತಿ ಮತ್ತು ಪದೋನ್ನತಿ ಮೀಸಲಾತಿ ಪಡೆದಿರುವ ಪ್ರಕರಣಗಳಿಗೆ ಉಲ್ಲೇಖ (1) ರಲ್ಲಿ ಕಾಣಿಸಿರುವ ಸರ್ಕಾರಿ ಆದೇಶದಲ್ಲಿ ವಿಸ್ತರಿಸುವ ಸೌಲಭ್ಯಗಳು ಅನ್ವಯವಾಗುವುದಿಲ್ಲ ಎಂದು ಆದೇಶಿಸಲಾಗಿದೆ. ಆದ್ದರಿಂದ 23-1-86ರ ನಂತರದ ಪ್ರಕರಣಗಳ ಬಗ್ಗೆ ಕಾನೂನುಗಳಿಗನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ರಾಜ್ಯ ಸರ್ಕಾರದ ವ್ಯಾಪ್ತಿಗೊಳಪಟ್ಟ ಎಲ್ಲಾ ಇಲಾಖೆಗಳ, ಸಾರ್ವಜನಿಕ ಸಂಸ್ಥೆಗಳ, ನಿಗಮಗಳ ಮತ್ತು ಮಂಡಳಿಗಳ ಮುಖ್ಯಾಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

ಡಿ. ಎನ್. ತಿಪ್ಪೇಸ್ವಾಮಿ 22/6/87
(ಡಿ.ಎನ್.ತಿಪ್ಪೇಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಗೆ:

ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ, ಸರಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಸಾಪ್ತಾಹಿಕ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಮತ್ತು 1,000 ಪ್ರತಿಗಳನ್ನು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗೆ (ಸಮಾಜ ಕಲ್ಯಾಣ 'ಬಿ' ಶಾಖೆಗೆ) ಕಳುಹಿಸುವಂತೆ ಕೋರಲಾಗಿದೆ.

ನಕಲು ಪ್ರತಿ:

1) ಕಾರ್ಯದರ್ಶಿಗಳು. ಕರ್ನಾಟಕ ಸರ್ಕಾರ.
2) ವಿಭಾಗಾಧಿಕಾರಿಗಳು.
3) ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು.
4) ಎಲ್ಲಾ ಜಿಲ್ಲಾಧಿಕಾರಿಗಳು (ತಮ್ಮ ಅಧೀನ ಅಧಿಕಾರಿಗಳಿಗೆ ತಿಳಿಸುವಂತೆ ಕೋರಲಾಗಿದೆ)
5) ಇಲಾಖಾ ಮುಖ್ಯಸ್ಥರುಗಳು.
6) ಉಪ ವಿಭಾಗಾಧಿಕಾರಿಗಳು.
7) ಆರಕ್ಷಕ ಉಪ ಮಹಾ ನಿರೀಕ್ಷಕರು, ನಾಗರೀಕ ಹಕ್ಕು ಸಮಾಚಾರಣ ವಿಭಾಗ, ಬೆಂಗಳೂರು.
8) ರಾಜ್ಯದ ಎಲ್ಲಾ ತಾಲ್ಲೂಕಿನ ತಹಸೀಲ್ದಾರರುಗಳಿಗೆ,
9) ನಿರ್ದೇಶಕರು, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
10) ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್.
11) ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು.
12) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,
13) ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,
14) ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
15) ಕಾರ್ಯದರ್ಶಿ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯವರ ಆಪ್ತ ಕಾರ್ಯದರ್ಶಿ.
16) ಸಾಪ್ತಾಹಿಕ ರಾಜ್ಯ ಪತ್ರ.
17) ಶಾಖಾ ಕಡತ.
18) ಪತ್ರಿಕಾ ಸಮ್ಮೇಳನ.

DESPATCHING CLERK
Social Welfare & Labour Depart
Bangalore.

ಜೆ.ಕೆ.



On India Govt. Service

BOOK - POST